# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಗಳನ್ನು ಮೌಲ್ಯಮಾಪನ ಮಾಡಲು ಎಲ್ಲಾ ಜಿಲ್ಲೆಗಳಲ್ಲಿ ಈಗಾಗಲೇ ಸ್ಥಾಪಿಸಲಾಗಿರುವ ಜಿಲ್ಲಾ ಅಂಗವಿಕಲರ ಸಮಿತಿಗಳನ್ನು ಜಿಲ್ಲಾ ಮಟ್ಟದ ಪ್ರಾಧಿಕಾರಿ ಮತ್ತು ಜಿಲ್ಲಾ ಮಟ್ಟದಲ್ಲಿ ಮೌಲ್ಯಮಾಪನ ಸಮಿತಿಗಳನ್ನು ರಚಿಸುವ ಬಗ್ಗೆ.

**ಓದಲಾಗಿದೆ:**

1. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ರವರ ಕಡತ ಸಂಖ್ಯೆ: DEDASC/OTHE/RPWD/2/2022

2. ಭಾರತ ಸರ್ಕಾರ ಅಧಿಸೂಚನೆ ದಿನಾಂಕ: 11.03.2019

3. ಸರ್ಕಾರಿ ಆದೇಶ ಸಂಖ್ಯೆ: ಮಮಇ: 145 ಪಿಹೆಚ್‌ಪಿ 2019, ದಿನಾಂಕ: 22.10.2019

4. ಆಯುಕ್ತರು, ರಾಜ್ಯ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ ಇವರ ಪತ್ರ ಸಂಖ್ಯೆ: ವಿಹಿನಿ: ಅಂಸನಿ: ಉ:ಬೆಂ: ಮೌಲ್ಯಮಾಪನ/27/2022-23/678, ದಿನಾಂಕ:12.10.2022

## ಪ್ರಸ್ತಾವನೆ:

ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ಸೆಕ್ಷನ್ 38(1)ರ ರಲ್ಲಿನ ಮಾನದಂಡಗಳಿಗನುಣವಾಗಿ ಅಂಗವಿಕಲತೆಯುಳ್ಳ ಯಾರೇ ವ್ಯಕ್ತಿಯು ತನಗೆ ಉನ್ನತ ಬೆಂಬಲದ ಅಗತ್ಯವಿದೆ ಎಂದಾದರೆ ಸರ್ಕಾರವು ರಚಿಸಿರುವ ಪ್ರಾಧಿಕಾರಕ್ಕೆ ಉನ್ನತ ಬೆಂಬಲ ಕೋರಿ ಅರ್ಜಿ ಸಲ್ಲಿಸಬಹುದಾಗಿದೆ,

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರಲ್ಲಿ ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರಗಳು ಜಿಲ್ಲಾ ಮಟ್ಟದಲ್ಲಿ ಅಥವಾ ವಿಭಾಗ ಮಟ್ಟದಲ್ಲಿ ಉನ್ನತ ಬೆಂಬಲದ ಅಗತ್ಯವಿರುವ ವಿಕಲಚೇತನರನ್ನು ಮೌಲ್ಯಮಾಪನ ಮಂಡಳಿಯನ್ನು ರಚಿಸಿ ಅಧಿಸೂಚನೆ ಹೊರಡಿಸಿರುತ್ತದೆ.

ರಾಜ್ಯದಲ್ಲಿ ಶೇ. 70 ಕ್ಕಿಂತಲೂ ಹೆಚ್ಚಿನ ಪ್ರಮಾಣದ ಅಂಗವಿಕಲತೆಯುಳ್ಳ ಬಹುತೇಕ ವ್ಯಕ್ತಿಗಳಿಗೆ ಉನ್ನತ ಬೆಂಬಲದ ಅವಶ್ಯಕತೆ ಇರುತ್ತದೆ. ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016ರ ಸೆಕ್ಷನ್ 38(1)ರ ಪ್ರಕಾರ ಉನ್ನತ ಬೆಂಬಲದ ಅಗತ್ಯವಿರುವ ವಿಕಲಚೇತನರ ವ್ಯಕ್ತಿಗಳು ಅರ್ಜಿ ಸಲ್ಲಿಸಲು ಒಂದು ಪ್ರಾಧಿಕಾರವನ್ನು ರಚಿಸಬೇಕಾಗಿರುತ್ತದೆ. ಈ ರೀತಿ ಗುರುತಿಸಿದ ಪ್ರಾಧಿಕಾರವು ಅಂಗವಿಕಲರ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016ರ ಸೆಕ್ಷನ್ 38(2)ರ ಪ್ರಕಾರ ಉನ್ನತ ಬೆಂಬಲ ಕೋರಿ ಸಲ್ಲಿಸುವ ಅರ್ಜಿಗಳನ್ನು ಜಿಲ್ಲಾ ಮಟ್ಟದ ಮೌಲ್ಯಮಾಪನ ಸಮಿತಿಗೆ ಕಳುಹಿಸಿ ಅರ್ಜಿದಾರರಿಗೆ ಉನ್ನತ ಬೆಂಬಲದ ಅವಶ್ಯಕತೆ ಇರುವ ಬಗ್ಗೆ ಧೃಢೀಕರಿಸಲು ಸೂಚಿಸುತ್ತದೆ. ಸದರಿ ಮನವಿಯನ್ನು ಪರಿಶೀಲಿಸಿದ ಮೌಲ್ಯಮಾಪನ ಸಮಿತಿಯು ತನ್ನ ವರದಿಯನ್ನು ಜಿಲ್ಲಾ ಮಟ್ಟದ ಪ್ರಾಧಿಕಾರಕ್ಕೆ ಕಳುಹಿಸುತ್ತದೆ.

ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016ರ ಸೆಕ್ಷನ್ 72 ಹಾಗೂ ರಾಜ್ಯ ನಿಯಮಾವಳಿಗಳ ನಿಯಮ 28ರನ್ವಯ ರೀತ್ಯ ಈಗಾಗಲೇ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಪದಾಧಿಕಾರಿಗಳನ್ನೊಳಗೊಂಡ ಜಿಲ್ಲಾ ಮಟ್ಟದ ಅಂಗವಿಕಲರ ಸಮಿತಿಯನ್ನು ರಚಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಲ್ಲಿ ಆದೇಶ ಹೊರಡಿಸಿರುತ್ತದೆ. ಸದರಿ ಸಮಿತಿಯನ್ನೇ ಉನ್ನತ ಬೆಂಬಲದ ಅಗತ್ಯವಿರುವ ವ್ಯಕ್ತಿಗಳನ್ನು ಗುರುತಿಸುವ ಪ್ರಾಧಿಕಾರಗಳನ್ನಾಗಿ ಕಾರ್ಯನಿರ್ವಹಿಸಲು ಸಮಿತಿಯನ್ನು ರಚಿಸುವಂತೆ ಕೋರಿರುತ್ತಾರೆ.

| ಕ್ರ ಸಂ | ಮಂಡಳಿಯ ಸದ್ಯಸರ ವಿವರ | ಪದನಾಮ |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು | ಉಪಾಧ್ಯಕ್ಷರು |
| 3 | ಜಿಲ್ಲಾ ಆರಕ್ಷಕ ಅಧೀಕ್ಷಕರು | ಪದನಿಮಿತ್ತ ಸದಸ್ಯರು |
| 4 | ಜಿಲ್ಲಾ ಶಸ್ತ್ರಚಿಕಿತ್ಸಕರು ಅಥವಾ ವೈದ್ಯಕೀಯ ಅಧೀಕ್ಷಕರು | ಪದನಿಮಿತ್ತ ಸದಸ್ಯರು |
| 5 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಗಳು | ಪದನಿಮಿತ್ತ ಸದಸ್ಯರು |
| 6 | ಮನೋವೈದ್ಯರು, ಜಿಲ್ಲಾ ಆಸ್ಪತ್ರೆ | ಪದನಿಮಿತ್ತ ಸದಸ್ಯರು |
| 7 | ಜಿಲ್ಲಾ ಪಬ್ಲಿಕ್ ಪ್ರಸಿಕ್ಯೂಟರ್ | ಪದನಿಮಿತ್ತ ಸದಸ್ಯರು |
| 8 | ಕಾರ್ಯದರ್ಶಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ | ಪದನಿಮಿತ್ತ ಸದಸ್ಯರು |
| 9 | ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಬ್ಬರು ಸೇವಾ ಪ್ರತಿನಿಧಿಗಳನ್ನು ಜಿಲ್ಲಾಧಿಕಾರಿಗಳು ನಾಮ ನಿರ್ದೇಶನ ಮಾಡುವುದು | ಸದಸ್ಯರು |
| 10 | ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016ರ ಸೆಕ್ಷನ್ 2ರಲ್ಲಿ ಸೂಚಿಸಿರುವಂತೆ ವಿವಿಧ ಬಗೆಯ ಐವರು ವಿಕಲಚೇತನರನ್ನು ಮೀರದಂತೆ ಜಿಲ್ಲಾಧಿಕಾರಿಗಳು ನಾಮ ನಿರ್ದೇಶನ ಮಾಡುವುದು | ಸದಸ್ಯರು |
| 11 | ಅಧ್ಯಕ್ಷರು ಸೂಚಿಸುವ ಯಾವುದೇ ಸದಸ್ಯರು | ಸದಸ್ಯರು |
| 12 | ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರ ಹುದ್ದೆಯ ಶ್ರೇಣಿಯ ಕಡಮೆ ಇಲ್ಲದ ಪ್ರತಿನಿಧಿ | ಸದಸ್ಯರು |
| 13 | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯರು |
| 14 | ಉಪ ನಿರ್ದೇಶಕರು, ಶಿಕ್ಷಣ ಇಲಾಖೆ | ಸದಸ್ಯರು |
| 15 | ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |
| 16 | ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಮತ್ತು ಬಂದರು ಇಲಾಖೆ | ಸದಸ್ಯರು |
| 17 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು | ಸದಸ್ಯ ಕಾರ್ಯದರ್ಶಿ |

**ಜಿಲ್ಲಾ ಮಟ್ಟದ ಪ್ರಾಧಿಕಾರದ ಕರ್ತವ್ಯ ಮತ್ತು ಜವಾಬ್ದಾರಿಗಳು:-**

1. ಮೇಲೆ ರಚಿಸಿದ ಪ್ರಾಧಿಕಾರವು ಉನ್ನತ ಬೆಂಬಲದ ಅವಶ್ಯಕತೆ ಇರುವ ವಿಕಲಚೇತನ ವ್ಯಕ್ತಿಯು ಸಲ್ಲಿಸುವ ಮನವಿಯನ್ನು ಜಿಲ್ಲಾ ಮಟ್ಟದ ಮೌಲ್ಯಮಾಪನ ಮಂಡಳಿಗೆ ಕಳುಹಿಸತಕ್ಕದ್ದು.
2. ಒಂದು ವೇಳೆ ಮೌಲ್ಯಮಾಪನ ಮಂಡಳಿಗಳು ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಯ ಮೌಲ್ಯಮಾಪನ ಮಾಡಲು ನಿರಾಕರಿಸಿದಲ್ಲಿ ಅಥವಾ ಆತನಿಗೆ ಸೂಕ್ತ ಮಾರ್ಗದರ್ಶನ ನೀಡಿದ್ದಲ್ಲಿ ಮೇಲ್ಕಂಡವಿ ಪ್ರಾಧಿಕಾರವಾಗಿ ಸಹ ಕಾರ್ಯನಿರ್ವಹಿಸಿ, ಅರ್ಜಿದಾರನು ಉನ್ನತ ಬೆಂಬಲ ಪಡೆಯಲು ಅರ್ಹನಾಗಿದ್ದಲ್ಲಿ ಅಂತಹ ವ್ಯಕ್ತಿಗೆ ಈ ಸೌಲಭ್ಯ ಕಲ್ಪಿಸುವುದು.
3. ಈ ಮೇಲಿನಂತೆ ರಚಿಸಲಾದ ಪ್ರಾಧಿಕಾರವು ರಾಜ್ಯ ಸರ್ಕಾರದ ಯೋಜನೆ/ಕಾರ್ಯಕ್ರಮಗಳನ್ನು ಗಮನದಲ್ಲಿಟ್ಟುಕೊಂಡು ಮೌಲ್ಯಮಾಪನ ಮಂಡಳಿಯ ಶಿಫಾರಸ್ಸುಗಳ ಆಧಾರದ ಮೇಲೆ ಹೆಚ್ಚಿನ ಬೆಂಬಲದ ಅಗತ್ಯತೆಯುಳ್ಳ ಅರ್ಜಿದಾರರಿಗೆ ಸರ್ಕಾರದ ಸೌಲಭ್ಯಗಳನ್ನು ಒದಗಿಸತಕ್ಕದ್ದು, ಕೇಂದ್ರ ಸರ್ಕಾರದ ಅಧಿಸೂಚನೆಯನ್ವಯ ಈ ರೀತಿ ಉನ್ನತ ಬೆಂಬಲದ ಅವಶ್ಯಕತೆ ಇರುವುದಾಗಿ ಅರ್ಜಿ ಸಲ್ಲಿಸುವ ಅಂಗವಿಕಲ ವ್ಯಕ್ತಿಯ ಮೌಲ್ಯಮಾಪನ ಮಾಡಲು ಮೌಲ್ಯಮಾಪನ ಮಂಡಳಿಗಳನ್ನು ರಚಿಸಬೇಕಾಗಿದ್ದು, ಕೇಂದ್ರ ಸರ್ಕಾರದ ಅಧಿಸೂಚನೆಯನ್ವಯ ಮೇಲೆ ಓದಲಾದ ಕ್ರಮ ಸಂಖ್ಯೆ: (3)ರಂತೆ ಈ ಕೆಳಕಂಡಂತೆ ಜಿಲ್ಲಾ ಮಟ್ಟದ ಮೌಲ್ಯಮಾಪನ ಮಂಡಳಿಯನ್ನು ರಚನೆ ಮಾಡಲಾಗಿರುತ್ತದೆ.

..3

2. ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಗಳ ಮೌಲ್ಯಮಾಪನಕ್ಕಾಗಿ ಕೇಂದ್ರ ಸರ್ಕಾರ ಅಧಿಸೂಚನೆ ಮೇಲೆ ಓದಲಾದ ಕ್ರಮ ಸಂಖ್ಯೆ(3) ರನ್ವಯ ಈ ಕೆಳಕಂಡ ಸದಸ್ಯರನ್ನೊಳಗೊಂಡ ಜಿಲ್ಲಾ ಮಟ್ಟದ ಮೌಲ್ಯಮಾಪನಾ ಮಂಡಳಿಯನ್ನಾಗಿ ರಚಿಸಿದೆ.

| ಕ್ರ ಸಂ | ಮಂಡಳಿಯ ಸದ್ಯಸರ ವಿವರ | ಪದನಾಮ |
|---|---|---|
| 1 | ಜಿಲ್ಲಾ ಮುಖ್ಯ ವೈದ್ಯಕೀಯ ಅಧಿಕಾರಿ ಅಥವಾ ಸಿವಿಲ್ ಸರ್ಜನ್ ಅಥವಾ ವೈದ್ಯಕೀಯ ಅಧೀಕ್ಷಕರು | ಅಧ್ಯಕ್ಷರು |
| 2 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು | ಸದಸ್ಯ ಕಾರ್ಯದರ್ಶಿ |
| 3 | ಐದು ಜನ ಪುನರ್ವಸತಿ ತಜ್ಞರು (ದೈಹಿಕ ಔಷಧ ಮತ್ತು ಪುನರ್ವಸತಿ ಅಥವಾ ಮೂಳೆ ತಜ್ಞರು, ENT ತಜ್ಞ, ನೇತ್ರಶಾಸ್ತ್ರಜ್ಞ, ಸಾಮಾನ್ಯ ವೈದ್ಯ (ಅರ್ಜಿದಾರರು 18ವರ್ಷ ಅಥವಾ ಅದಕ್ಕಿಂತ ಹೆಚ್ಚಿನವರಾಗಿದ್ದಲ್ಲಿ) ಅಥವಾ ಶಿಶುವೈದ್ಯರು (ಒಂದು ವೇಳೆ ಅರ್ಜಿದಾರರು 18ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದಲ್ಲಿ) ಮನೋವೈದ್ಯರು) | ಸದಸ್ಯರು |
| 4 | ಆಕ್ಯೂಪೇಷನಲ್ ಥೆರಪಿಸ್ಟ್ ಅಥವಾ ಸ್ಪೀಚ್ ಥೆರಪಿಸ್ಟ್ ಅಥವಾ ಕ್ಲೀನಿಕಲ್ ಸೈಕಾಲಜಿಸ್ಟ್ ಅಥವಾ ಫಿಸಿಯೋಥೆರಪಿಸ್ಟ್ (ಅಗತ್ಯತೆಗೆ ತಕ್ಕಂತೆ) | ಸದಸ್ಯರು |
| 5 | ಅಧ್ಯಕ್ಷರು ಸೂಕ್ತವೆಂದು ಭಾವಿಸಿ ಆಯ್ಕೆಮಾಡುವ ಯಾವುದೇ ಇತರೆ ತಜ್ಞರು | ಸದಸ್ಯರು |

**ಜಿಲ್ಲಾ ಮಟ್ಟದ ಮೌಲ್ಯಮಾಪನ ಮಂಡಳಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳು:-**

1. ಜಿಲ್ಲಾ ಮಟ್ಟದ ಪ್ರಾಧಿಕಾರವು ಕಳುಹಿಸಿಕೊಡುವ ಉನ್ನತ ಬೆಂಬಲದ ಅವಶ್ಯಕತೆ ಇರುವ ವಿಕಲಚೇತನ ವ್ಯಕ್ತಿಗಳ ಮನವಿಯನ್ನು ಪರಿಶೀಲಿಸಿ ಅಂತಹ ವ್ಯಕ್ತಿಯ ಮೌಲ್ಯಮಾಪನ ಮಾಡತಕ್ಕದ್ದು. ಅಗತ್ಯವಿದ್ದಲ್ಲಿ ಅಂತಹ ವ್ಯಕ್ತಿಯನ್ನು ವ್ಯದ್ಯಕೀಯ ತಪಾಸಣೆಗೆ ಒಳಪಡಿಸತಕ್ಕದ್ದು.

2. ಮೌಲ್ಯಮಾಪನ ಮಂಡಳಿಯು ಅರ್ಜಿದಾರರನ್ನು ಆರು ನಿಯತಾಂಕಗಳ (a) ಯಿಂದ (f) ಆಧಾರದ ಮೇಲೆ ಮೌಲ್ಯ ಮಾಪನ ಮಾಡಲು ಮತ್ತು ಅಂಕಗಳನ್ನು ನಿಗಧಿಪಡಿಸಲು ಕೆಳಗೆ ಸೂಚಿಸಲಾದ 100 ಪಾಯಿಂಟ್ ಗ್ರೇಡ್/ ವೇಟೇಜ್ ಮಾರ್ಗಸೂಚಿಯನ್ನು ಅಳವಡಿಸಿಕೊಂಡು ಅಂಕಗಳನ್ನು ನೀಡತಕ್ಕದ್ದು.

| Parameters | | Weightage |
|---|---|---|
| (a) Severity of Physical disability<br>(Max. weightage-25) | (a) 40%-59%<br>(b) 60%-79%<br>(c) 80%-100% | 15<br>20<br>25 |
| (b) Severity of mental/developmental disability (which restricts the persons to take any informed decision)<br>(Max. weightage-25) | (a) 40%-59%<br>(b) 60%-79%<br>(c) 80%-100% | 15<br>20<br>25 |

| | | |
|---|---|---|
| (c) The extent to which daily activities in a person in hampered<br>(Max. weightage-35) | (i) Bating Brushing, combing, Dressing | 10 |
| | (ii) Toilet hygiene, ( getting to the toilet, cleaning oneself, getting backup ect) | 10 |
| | (iii) Functional mobility ( ability to work, get in and out of bed, get in and out of a chair, moving from one place to other while performing activities) | 10 |
| | (iv) Self-feeding (not including cooking) | 5 |
| (d) cognitive Abilities like to take safety measures to use transport, logistics, gadgets, and not get lost<br>(Max. weightage-5) | - | 5 |
| (e) Environmental Barriers like access to health care or support system for rehabilitation or health needs<br>(Max. weightage-5) | - | 5 |
| (f) Socio- economic status<br>(Max. weightage-5) | APL<br>BPL | 0<br>5 |
| Total | | 100 |

3. ಮೇಲೆ ಉಲ್ಲೇಖಿಸಲಾದ 100 ಅಂಕಗಳಲ್ಲಿ 60 ಅಂಕಗಳೊಂದಿಗೆ ಅಂಗವೈಕಲ್ಯ ಮಾನದಂಡ ಹೊಂದಿರುವ ಯಾವುದೇ ವ್ಯಕ್ತಿಯನ್ನು ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಲ ವ್ಯಕ್ತಿಯೆಂದು ಮಂಡಳಿಯು ಶಿಫಾರಸ್ಸು ಮಾಡಬಹುದು.

4. ಈ ರೀತಿ ಮೌಲ್ಯಮಾಪನ ಮಾಡಿದ ವರದಿಯನ್ನು ಪ್ರಾಧಿಕಾರದಿಂದ ಅರ್ಜಿ ಸ್ವೀಕೃಗೊಂಡ 90 ದಿನಗಳಒಳಗಾಗಿ ಪ್ರಾಧಿಕಾರಕ್ಕೆ ತನ್ನ ಶಿಫಾರಸ್ಸಿನೊಂದಿಗೆ ವರದಿಯನ್ನು ಸಲ್ಲಿಸತಕ್ಕದ್ದು.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಮಮಇ 227 ಪಿಹೆಚ್‌ಪಿ 2022, ಬೆಂಗಳೂರು, ದಿ: 23.11.2022</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶೇ75% ಮೇಲ್ಪಟ್ಟ ವಿಕಲತೆಯನ್ನು ತೀರ್ವತರನಾದ ಅಂಗವಿಕಲತೆ ಎಂದು ದುರುಪಯೋಗ ಮಾಡಿಕೊಳ್ಳುವುದನ್ನು ತಡೆಗಟ್ಟುವ ಸಲುವಾಗಿ ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಗಳನ್ನು ಗುರುತಿಸುವ ಪ್ರಾಧಿಕಾರಗಳನ್ನು ಕಾರ್ಯನಿರ್ವಹಿಸಲು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016ರ ಸೆಕ್ಷನ್ 72ರ ಪ್ರಕಾರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ವಿಕಲಚೇತನರ ಜಿಲ್ಲಾ ಮಟ್ಟದ ಪ್ರಾಧಿಕಾರ ಮತ್ತು ಮೌಲ್ಯ ಮಾಪನ ಸಮಿತಿಯನ್ನಾಗಿ ರಚಿಸಲಾಗಿದೆ.

1. ಉನ್ನತ ಬೆಂಬಲದ ಅಗತ್ಯವಿರುವ ವಿಕಲಚೇತನ ವ್ಯಕ್ತಿಗಳು ಅರ್ಜಿಸಲ್ಲಿಸಲು ಜಿಲ್ಲಾ ಮಟ್ಟದ ಪ್ರಾಧಿಕಾರ

ಅಂಗವಿಕಲ ವ್ಯಕ್ತಿಗಳ ಅಧಿನಿಯಮ ಸೆಕ್ಷನ್-72 ರಂತೆ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ರಚನೆಗೊಂಡಿರುವ ಜಿಲ್ಲಾ ಮಟ್ಟದ ಅಂಗವಿಕಲರ ಸಮಿತಿಗಳನ್ನು ಜಿಲ್ಲಾ ಮಟ್ಟದ ಪ್ರಾಧಿಕಾರವನ್ನಾಗಿ ರಚಿಸಲಾಗಿದೆ.

| ಕ್ರ ಸಂ | ಮಂಡಳಿಯ ಸದ್ಯಸರ ವಿವರ | ಪದನಾಮ |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು | ಉಪಾಧ್ಯಕ್ಷರು |
| 3 | ಜಿಲ್ಲಾ ಆರಕ್ಷಕ ಅಧೀಕ್ಷಕರು | ಪದನಿಮಿತ್ತ ಸದಸ್ಯರು |
| 4 | ಜಿಲ್ಲಾ ಶಸ್ತ್ರಚಿಕಿತ್ಸಕರು ಅಥವಾ ವೈದ್ಯಕೀಯ ಅಧೀಕ್ಷಕರು | ಪದನಿಮಿತ್ತ ಸದಸ್ಯರು |
| 5 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಗಳು | ಪದನಿಮಿತ್ತ ಸದಸ್ಯರು |
| 6 | ಮನೋವೈದ್ಯರು, ಜಿಲ್ಲಾ ಆಸ್ಪತ್ರೆ | ಪದನಿಮಿತ್ತ ಸದಸ್ಯರು |
| 7 | ಜಿಲ್ಲಾ ಪಬ್ಲಿಕ್ ಪ್ರಸಿಕ್ಯೂಟರ್ | ಪದನಿಮಿತ್ತ ಸದಸ್ಯರು |
| 8 | ಕಾರ್ಯದರ್ಶಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ | ಪದನಿಮಿತ್ತ ಸದಸ್ಯರು |
| 9 | ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಬ್ಬರು ಸೇವಾ ಪ್ರತಿನಿಧಿಗಳನ್ನು ಜಿಲ್ಲಾಧಿಕಾರಿಗಳು ನಾಮ ನಿರ್ದೇಶನ ಮಾಡುವುದು | ಸದಸ್ಯರು |
| 10 | ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016ರ ಸೆಕ್ಷನ್ 2ರಲ್ಲಿ ಸೂಚಿಸಿರುವಂತೆ ವಿವಿಧ ಬಗೆಯ ಐವರು ವಿಕಲಚೇತನರನ್ನು ಮೀರದಂತೆ ಜಿಲ್ಲಾಧಿಕಾರಿಗಳು ನಾಮ ನಿರ್ದೇಶನ ಮಾಡುವುದು | ಸದಸ್ಯರು |
| 11 | ಅಧ್ಯಕ್ಷರು ಸೂಚಿಸುವ ಯಾವುದೇ ಸದಸ್ಯರು | ಸದಸ್ಯರು |
| 12 | ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರ ಹುದ್ದೆಯ ಶ್ರೇಣಿಯ ಕಡಮೆ ಇಲ್ಲದ ಪ್ರತಿನಿಧಿ | ಸದಸ್ಯರು |
| 13 | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯರು |
| 14 | ಉಪ ನಿರ್ದೇಶಕರು, ಶಿಕ್ಷಣ ಇಲಾಖೆ | ಸದಸ್ಯರು |
| 15 | ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |
| 16 | ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಮತ್ತು ಬಂದರು ಇಲಾಖೆ | ಸದಸ್ಯರು |
| 17 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು | ಸದಸ್ಯ ಕಾರ್ಯದರ್ಶಿ |

**ಜಿಲ್ಲಾ ಮಟ್ಟದ ಪ್ರಾಧಿಕಾರದ ಕರ್ತವ್ಯ ಮತ್ತು ಜವಾಬ್ದಾರಿಗಳು:-**

1. ಮೇಲೆ ರಚಿಸಿದ ಪ್ರಾಧಿಕಾರವು ಉನ್ನತ ಬೆಂಬಲದ ಅವಶ್ಯಕತೆ ಇರುವ ವಿಕಲಚೇತನ ವ್ಯಕ್ತಿಯು ಸಲ್ಲಿಸುವ ಮನವಿಯನ್ನು ಜಿಲ್ಲಾ ಮಟ್ಟದ ಮೌಲ್ಯಮಾಪನ ಮಂಡಳಿಗ ಕಳುಹಿಸತಕ್ಕದ್ದು.

2. ಒಂದು ವೇಳೆ ಮೌಲ್ಯಮಾಪನ ಮಂಡಳಿಗಳು ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಯ ಮೌಲ್ಯಮಾಪನ ಮಾಡಲು ನಿರಾಕರಿಸಿದಲ್ಲಿ ಅಥವಾ ಆತನಿಗೆ ಸೂಕ್ತ ಮಾರ್ಗದರ್ಶನ ನೀಡಿದ್ದಲ್ಲಿ ಮೇಲ್ಮನವಿ ಪ್ರಾಧಿಕಾರವಾಗಿ ಸಹ ಕಾರ್ಯನಿರ್ವಹಿಸಿ, ಅರ್ಜಿದಾರನು ಉನ್ನತ ಬೆಂಬಲ ಪಡೆಯಲು ಅರ್ಹನಾಗಿದ್ದಲ್ಲಿ ಅಂತಹ ವ್ಯಕ್ತಿಗೆ ಈ ಸೌಲಭ್ಯ ಕಲ್ಪಿಸುವುದು.

..6

3. ಈ ಮೇಲಿನಂತೆ ರಚಿಸಲಾದ ಪ್ರಾಧಿಕಾರವು ರಾಜ್ಯ ಸರ್ಕಾರದ ಯೋಜನೆ/ಕಾರ್ಯಕ್ರಮಗಳನ್ನು ಗಮನದಲ್ಲಿಟ್ಟುಕೊಂಡು ಮೌಲ್ಯಮಾಪನ ಮಂಡಳಿಯು ಶಿಫಾರಸ್ಸು ಆಧಾರದ ಮೇಲೆ ಹೆಚ್ಚಿನ ಬೆಂಬಲದ ಅಗತ್ಯತೆಯುಳ್ಳ ಅರ್ಜಿದಾರರಿಗೆ ಸರ್ಕಾರದ ಸೌಲಭ್ಯಗಳನ್ನು ಒದಗಿಸತಕ್ಕದ್ದು. ಕೇಂದ್ರ ಸರ್ಕಾರದ ಅಧಿಸೂಚನೆಯನ್ವಯ ಈ ರೀತಿ ಉನ್ನತ ಬೆಂಬಲದ ಅವಶ್ಯಕತೆ ಇರುವುದಾಗಿ ಅರ್ಜಿಸಲ್ಲಿಸುವ ಅಂಗವಿಕಲ ವ್ಯಕ್ತಿಯ ಮೌಲ್ಯಮಾಪನ ಮಾಡಲು ಮೌಲ್ಯಮಾಪನ ಮಂಡಳಿಗಳನ್ನು ರಚಿಸಬೇಕಾಗಿದ್ದು, ಕೇಂದ್ರ ಸರ್ಕಾರದ ಅಧಿಸೂಚನೆಯನ್ವಯ ಮೇಲೆ ಓದಲಾದ ಕ್ರಮ ಸಂಖ್ಯೆ: (3)ರಂತೆ ಈ ಕೆಳಕಂಡಂತೆ ಜಿಲ್ಲಾ ಮಟ್ಟದ ಮೌಲ್ಯಮಾಪನ ಮಂಡಳಿಯನ್ನು ರಚನೆ ಮಾಡಲಾಗಿರುತ್ತದೆ.

**2. ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಕಲ ವ್ಯಕ್ತಿಗಳ ಮೌಲ್ಯಮಾಪನಕ್ಕಾಗಿ ಕೇಂದ್ರ ಸರ್ಕಾರ ಅಧಿಸೂಚನೆ ಮೇಲೆ ಓದಲಾದ ಕ್ರಮ ಸಂಖ್ಯೆ(3) ರನ್ವಯ ಈ ಕೆಳಕಂಡ ಸದಸ್ಯರನ್ನೊಳಗೊಂಡ ಜಿಲ್ಲಾ ಮಟ್ಟದ ಮೌಲ್ಯಮಾಪನಾ ಮಂಡಳಿಯನ್ನಾಗಿ ರಚಿಸಿದೆ.**

| ಕ್ರ ಸಂ | ಮಂಡಳಿಯ ಸದ್ಯಸರ ವಿವರ | ಪದನಾಮ |
|---|---|---|
| 1 | ಜಿಲ್ಲಾ ಮುಖ್ಯ ವೈದ್ಯಕೀಯ ಅಧಿಕಾರಿ ಅಥವಾ ಸಿವಿಲ್ ಸರ್ಜನ್ ಅಥವಾ ವೈದ್ಯಕೀಯ ಅಧೀಕ್ಷಕರು | ಅಧ್ಯಕ್ಷರು |
| 2 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು | ಸದಸ್ಯ ಕಾರ್ಯದರ್ಶಿ |
| 3 | ಐದು ಜನ ಪುನರ್ವಸತಿ ತಜ್ಞರು (ದೈಹಿಕ ಔಷಧ ಮತ್ತು ಪುನರ್ವಸತಿ ಅಥವಾ ಮೂಳೆ ತಜ್ಞರು, ENT ತಜ್ಞ, ನೇತ್ರಶಾಸ್ತ್ರಜ್ಞ, ಸಾಮಾನ್ಯ ವೈದ್ಯ (ಅರ್ಜಿದಾರರು 18ವರ್ಷ ಅಥವಾ ಅದಕ್ಕಿಂತ ಹೆಚ್ಚಿನವರಾಗಿದ್ದಲ್ಲಿ) ಅಥವಾ ಶಿಶುವೈದ್ಯರು (ಒಂದು ವೇಳೆ ಅರ್ಜಿದಾರರು 18ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದಲ್ಲಿ) ಮನೋವೈದ್ಯರು) | ಸದಸ್ಯರು |
| 4 | ಆಕ್ಯೂಪೇಷನಲ್ ಥೆರಪಿಸ್ಟ್ ಅಥವಾ ಸ್ಪೀಚ್ ಥೆರಪಿಸ್ಟ್ ಅಥವಾ ಕ್ಲಿನಿಕಲ್ ಸೈಕಾಲಜಿಸ್ಟ್ ಅಥವಾ ಫಿಸಿಯೋಥೆರಪಿಸ್ಟ್ (ಅಗತ್ಯತೆಗೆ ತಕ್ಕಂತೆ) | ಸದಸ್ಯರು |
| 5 | ಅಧ್ಯಕ್ಷರು ಸೂಕ್ತವೆಂದು ಭಾವಿಸಿ ಆಯ್ಕೆಮಾಡುವ ಯಾವುದೇ ಇತರ ತಜ್ಞರು | ಸದಸ್ಯರು |

**ಜಿಲ್ಲಾ ಮಟ್ಟದ ಮೌಲ್ಯಮಾಪನ ಮಂಡಳಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳು:-**

1. ಜಿಲ್ಲಾ ಮಟ್ಟದ ಪ್ರಾಧಿಕಾರವು ಕಳುಹಿಸಿಕೊಡುವ ಉನ್ನತ ಬೆಂಬಲದ ಅವಶ್ಯಕತೆ ಇರುವ ವಿಕಲಚೇತನ ವ್ಯಕ್ತಿಗಳ ಮನವಿಯನ್ನು ಪರಿಶೀಲಿಸಿ ಅಂತಹ ವ್ಯಕ್ತಿಯ ಮೌಲ್ಯಮಾಪನ ಮಾಡತಕ್ಕದ್ದು. ಅಗತ್ಯವಿದ್ದಲ್ಲಿ ಅಂತಹ ವ್ಯಕ್ತಿಯನ್ನು ವ್ಯದ್ಯಕೀಯ ತಪಾಸಣೆಗೆ ಒಳಪಡಿಸತಕ್ಕದ್ದು.
2. ಮೌಲ್ಯಮಾಪನ ಮಂಡಳಿಯು ಅರ್ಜಿದಾರರನ್ನು ಆರು ನಿಯತಾಂಕಗಳ (a) ಯಿಂದ (f) ಆಧಾರದ ಮೇಲೆ ಮೌಲ್ಯ ಮಾಪನ ಮಾಡಲು ಮತ್ತು ಅಂಕಗಳನ್ನು ನಿಗಧಿಪಡಿಸಲು ಕೆಳಗೆ ಸೂಚಿಸಲಾದ 100 ಪಾಯಿಂಟ್ ಗ್ರೇಡ್/ ವೇಟೇಜ್ ಮಾರ್ಗಸೂಚಿಯನ್ನು ಅಳವಡಿಸಿಕೊಂಡು ಅಂಕಗಳನ್ನು ನೀಡತಕ್ಕದ್ದು.

..7

| Parameters | | Weightage |
|---|---|---|
| (a) Severity of Physical disability<br>(Max. weightage-25) | (a) 40%-59%<br>(b) 60%-79%<br>(c) 80%-100% | 15<br>20<br>25 |
| (b) Severity of mental/developmental disability (which restricts the persons to take any informed decision)<br>(Max. weightage-25) | (a) 40%-59%<br>(b) 60%-79%<br>(c) 80%-100% | 15<br>20<br>25 |
| (c) The extent to which daily activities in a person in hampered<br>(Max. weightage-35) | (i) Bating Brushing, combing, Dressing | 10 |
| | (ii) Toilet hygiene, ( getting to the toilet, cleaning oneself, getting backup ect) | 10 |
| | (iii) Functional mobility ( ability to work, get in and out of bed, get in and out of a chair, moving from one place to other while performing activities) | 10 |
| | (iv) Self-feeding (not including cooking) | 5 |
| (d) cognitive Abilities like to take safety measures to use transport, logistics, gadgets, and not get lost<br>(Max. weightage-5) | - | 5 |
| (e) Environmental Barriers like access to health care or support system for rehabilitation or health needs<br>(Max. weightage-5) | - | 5 |
| (f) Socio- economic status | APL | 0 |
| (Max. weightage-5) | BPL | 5 |
| Total | | 100 |

3. ಮೇಲೆ ಉಲ್ಲೇಖಿಸಲಾದ 100 ಅಂಕಗಳಲ್ಲಿ 60 ಅಂಕಗಳೊಂದಿಗೆ ಅಂಗವೈಕಲ್ಯ ಮಾನದಂಡ ಹೊಂದಿರುವ ಯಾವುದೇ ವ್ಯಕ್ತಿಯನ್ನು ಉನ್ನತ ಬೆಂಬಲದ ಅಗತ್ಯವಿರುವ ಅಂಗವಿಲ ವ್ಯಕ್ತಿಯೆಂದು ಮಂಡಳಿಯು ಶಿಫಾರಸ್ಸು ಮಾಡಬಹುದು.

4. ಈ ರೀತಿ ಮೌಲ್ಯಮಾಪನ ಮಾಡಿದ ವರದಿಯನ್ನು ಪ್ರಾಧಿಕಾರದಿಂದ ಅರ್ಜಿ ಸ್ವೀಕೃಗೊಂಡ 90 ದಿನಗಳ ಒಳಗಾಗಿ ಪ್ರಾಧಿಕಾರಕ್ಕೆ ತನ್ನ ಶಿಫಾರಸ್ಸಿನೊಂದಿಗೆ ವರದಿಯನ್ನು ಸಲ್ಲಿಸತಕ್ಕದ್ದು.

ಉನ್ನತ ಬೆಂಬಲದ ಅಗತ್ಯವಿರುವ ವ್ಯಕ್ತಿಗಳನ್ನು ಮೌಲ್ಯ ಮಾಪನ ಮಾಡಲು ಜಿಲ್ಲಾ ಮಟ್ಟದ ಸಮಿತಿ ರಚಿಸಿ ಹೊರಡಿಸಲಾದ ಸರ್ಕಾರಿ ಆದೇಶ ಸಂಖ್ಯೆ: ಮಮಇ 227 ಪಿಹೆಚ್‌ಪಿ 2022, ದಿನಾಂಕ: 20.10.2022ರ ಸರ್ಕಾರಿ ಆದೇಶವನ್ನು ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

G. H. Sarojamma 23/11/2022
(ಜಿ. ಹೆಚ್. ಸರೋಜಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು(ಜಿ& ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು(ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು(ಎ&ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ",ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001
4. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ, ವಿ.ವಿ.ಗೋಪುರ, ಬೆಂಗಳೂರು.
5. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ(10), ವಿಧಾನ ಸೌಧ, ಬೆಂಗಳೂರು
7. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಶಾಖಾಧಿಕಾರಿ, ಸ್ವೀಕೃತಿ ಮತ್ತು ರವಾನೆ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಶಾಖಾ ರಕ್ಷಾ ಕಡತ/ ಒಡಿಜಿಸಿ/ ಹೆಚ್ಚುವರಿ ಪ್ರತಿಗಳು.